

# ಪಾಕ್ ನಟಿ ಮಹಿರಾ ಖಾನ್ ಬಾಲಿವುಡ್‌ಗೆ

ಪಾಕಿಸ್ತಾನದ ಕಿರುತೆರೆ ನಟಿ ಮಹಿರಾ ಖಾನ್ 'ಹಮ್‌ಸಫರ್' ಧಾರಾವಾಹಿ ಮೂಲಕ ಪಾಕ್‌ನಲ್ಲಿ ಮನೆಮಾತು. ಪಾಕ್‌ನ ಕಿರುತೆರೆ ಪ್ರಿಯರ 'ಹೃದಯದ ರಾಣಿ' ಈಗ ಬಾಲಿವುಡ್ ಜತೆ ನಂಟು ಬೆಳೆಸುತ್ತಿದ್ದಾರೆ.

ಶಾರೂಖ್ ಖಾನ್ ಅಭಿನಯದ 'ರಯೀಸ್' ಚಿತ್ರದ ಮೂಲಕ ಮಹಿರಾ ಬಿ-ಟೌನ್‌ಗೆ ಕಾಲಿಡುತ್ತಿದ್ದಾರೆ. ಪಾದಾರ್ಪಣೆಯ ಚಿತ್ರದಲ್ಲಿಯೇ ಶಾರೂಖ್ ಖಾನ್ ಜತೆ ತೆರೆ ಹಂಚಿಕೊಂಡ ದೀಪಿಕಾ ಪಡುಕೋಣೆ ಮತ್ತು ಅನುಷ್ಕಾ ಶರ್ಮಾರ ಅದೃಷ್ಟದ ದೆಸೆಯೇ ಬದಲಾದ ಉದಾಹರಣೆ ಅವರ ಮುಂದಿದೆ. ಕರಾಚಿಯ ಈ ಚೆಲುವೆಗೂ ಆ ಉದಾಹರಣೆಗಳೇ ಸ್ಫೂರ್ತಿ ಮತ್ತು ಭರವಸೆ.

ಮಹಿರಾ ಪಾಕ್ ಬೆಳ್ಳಿತೆರೆಯಲ್ಲಿಯೂ ಹೆಸರು ಮಾಡಿದವರು. 2011ರಲ್ಲಿ ಬಂದ 'ಬೋಲ್' ಮಹಿರಾರ ಮೊದಲ ಚಿತ್ರ. 'ನೀಯತ್' ಧಾರಾವಾಹಿಯಿಂದ ಕಿರುತೆರೆಗೆ ಅಡಿಯಿಟ್ಟವರು, 'ಹಮ್‌ಸಫರ್'ನಲ್ಲಿ ಜನಪ್ರಿಯರಾದರು. ಆ ಧಾರಾವಾಹಿಯ ಸಹ ನಟ ಫಾವದ್ ಖಾನ್ 'ಖೂಬ್‌ಸೂರತ್' ಚಿತ್ರದಲ್ಲಿ ಸೋನಂ ಕಪೂರ್ ಜತೆ ನಟಿಸುವ ಮೂಲಕ ಬಾಲಿವುಡ್ ಪ್ರವೇಶಿಸಿಯಾಗಿದೆ.

ಕಾಲೇಜು ದಿನಗಳ ಗೆಳೆಯ ಅಲಿ ಅಸ್ಕರಿ ಜತೆ ವಿವಾಹ ಬಂಧನಕ್ಕೊಳಗಾಗಿರುವ 30ರ ಹರೆಯದ ಮಹಿರಾ, ಶಾರೂಖ್ ಖಾನ್ ಜತೆಗೆ ಬೆಳ್ಳಿ ತೆರೆ ಹಂಚಿಕೊಳ್ಳುವ ಗಳಿಗೆಗೆ ಕಾತರರಾಗಿದ್ದಾರಂತೆ.

## ಪುನರ್ ಮಿಲನ!

ಬಾಲಿವುಡ್‌ನ ಜನಪ್ರಿಯ ಪ್ರೇಮ ಭಗ್ನ ಜೋಡಿ ಮತ್ತೆ ಒಂದುಗೂಡುತ್ತಿದೆ! ಈ ಪುನರ್ ಮಿಲನ ಆಗುತ್ತಿರುವುದು ನಿಜ ಜೀವನದಲ್ಲಲ್ಲ, ತೆರೆ ಮೇಲೆ. ಈ ಜೋಡಿ ಬೇರಾವುದೂ ಅಲ್ಲ ಶಾಹಿದ್ ಕಪೂರ್ ಮತ್ತು ಕರೀನಾ ಕಪೂರ್ ಅವರದು.

ಇಬ್ಬರ ನಡುವಿನ ಸಂಬಂಧ ಹಳಸಿದ ಬಳಿಕ ತಯಾರಾದ 'ಜಬ್ ವಿ ಮೆಟ್' ಯಶಸ್ವಿಯಾಗಿತ್ತು. ಅದರ ಬಳಿಕ ಹತ್ತಾರು ನಿರ್ದೇಶಕರು ಶತಪ್ರಯತ್ನ ಮಾಡಿದರೂ, ಜಪ್ಪಯ್ಯ ಅಂದರೂ ಇಬ್ಬರೂ ಒಟ್ಟಿಗೆ ತೆರೆ ಹಂಚಿಕೊಳ್ಳಲು ಒಪ್ಪಿರಲಿಲ್ಲ. ಶಾಹಿದ್ ಜತೆ ಇನ್ನೆಂದೂ ನಟಿಸುವುದಿಲ್ಲ ಎಂದು ಕರೀನಾ ಪ್ರತಿಜ್ಞೆಗೈದಿದ್ದರು. ಶಾಹಿದ್ ಕೂಡ ಇಂಥದ್ದೇ ತಣ್ಣನೆ ಪ್ರತಿಕ್ರಿಯೆ ನೀಡಿದ್ದರು.

ಈಗ ಇಬ್ಬರ ನಡುವಿನ ವಿರಸ ಶಮನವಾದಂತಿದೆ. 'ದೇಡ್ ಇಷ್ಕಿಯಾ' ಚಿತ್ರದ ನಿರ್ದೇಶಕ ಅಭಿಷೇಕ್ ಚೌಬೆ ಇವರನ್ನು ಒಂದುಗೂಡಿಸಿರುವ ಸಾಹಸಿ. ಈ ಸಮಾಗಮದ 'ಉಡ್ತಾ ಪಂಜಾಬ್' ಸೆಟ್ಟೇರುವುದು 2015ರ ಅಂತ್ಯದ ವೇಳೆಗೆ. ಮತ್ತೊಂದು ಮೂಲದ ಪ್ರಕಾರ, ಒಂದೇ ಚಿತ್ರದಲ್ಲಿ ನಟಿಸಿದರೂ ಶಾಹಿದ್ ಮತ್ತು ಕರೀನಾ ಒಟ್ಟಿಗೆ ತೆರೆ ಮೇಲೆ ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ. ಇಲ್ಲಿ ಶಾಹಿದ್‌ಗೆ ಜೋಡಿಯಾಗುತ್ತಿರುವುದು ಅಲಿಯಾ ಭಟ್. ಕರೀನಾ-ಶಾಹಿದ್ ಚಿತ್ರದಲ್ಲೆಲ್ಲೂ ಮುಖಾ-ಮುಖಿಯಾಗುವುದಿಲ್ಲ. ಕರೀನಾರಿಗೆ ಈ ವಿಚಾರವನ್ನು ಮನದಟ್ಟು ಮಾಡಿಯೇ ಅಭಿಷೇಕ್ ಅವರನ್ನು ಒಪ್ಪಿಸಿದ್ದಾರೆ ಎನ್ನಲಾಗುತ್ತಿದೆ.

■ ಅಮಿ

